# ❋ ಮಹಾರಾಷ್ಟ್ರದಲ್ಲಿ ಸಂತರ ಪ್ರಭಾವ ❋

**ರತ್ನಾಕರ ಹ. ಕುಲಕರ್ಣಿ**

ಬಿಜಾಪುರದ ನಿವಾಸಿಗಳಾದ ಲೇಖಕರು 'ಶಾಂತಿಕುಟೀರ ಸಂದೇಶ' ಪತ್ರಿಕೆಯ ಸಂಪಾದಕರಾಗಿದ್ದಾರೆ. ಉತ್ತಮವಾದ ವಿಚಾರಗಳನ್ನು ಹರಡುವಲ್ಲಿ ನಿರಂತರ ಶ್ರಮಿಸುತ್ತಿರುವ ಲೇಖಕರು ಮಹಾರಾಷ್ಟ್ರದ ಸಂತರ ಜೀವನ ಪ್ರಸಂಗಗಳನ್ನು ಸೊಗಸಾಗಿ ವರ್ಣಿಸಿದ್ದಾರೆ.

**ಮ**ಹಾರಾಷ್ಟ್ರದಲ್ಲಿ ಹನ್ನೆರಡನೆಯ ಶತಮಾನದಿಂದ ಅನೇಕ ಮಹಾನ್ ಸಂತರು ಅವತರಿಸಿದುದರಿಂದಲೇ ಆಗಿನ ಕಾಲದ ಕರ್ಮಪ್ರಧಾನವಾಗಿದ್ದ ಧರ್ಮವು ಮಾರ್ಪಾಟುಗೊಂಡು ಭಕ್ತಿಯ ಮಹಾಪೂರವು ಹರಿದು ಜನಸಾಮಾನ್ಯರನ್ನು ಪುನೀತ ಗೊಳಿಸಿತು. **ಜ್ಞಾನದೇವೇ ರಚಿಲಾ ಪಾಯಾ । ತುಕಾ ಝಾಲಾಸೇ ಕಳಸ ॥**

ಈ ಭಕ್ತಿ ಸಂಪ್ರದಾಯದ ಭದ್ರ ಬುನಾದಿಯನ್ನು ಸಂತ ಜ್ಞಾನೇಶ್ವರ ಮಹಾರಾಜರು ರಚಿಸಿದರು. ಇವರೊಡನೆ ನಾಮದೇವಾದಿ ಸಂತರು ಭಕ್ತಿ-ಜ್ಞಾನ-ವೈರಾಗ್ಯಗಳ ಉಪದೇಶದಿಂದ ಸುಂದರವಾದ ಜ್ಞಾನಮಂದಿರವನ್ನು ರಚಿಸಿದರು. ಭಕ್ತಿಯ ಭಾವಕ್ಕೆ ಒಲಿದು ವಿಷ್ಣುವಿನ ಅವತಾರವೇ ಆದ ಪಾಂಡುರಂಗನು ಪಂಢರಪುರದಲ್ಲಿ ಬಂದು ನೆಲೆಸಿದನು. ಸಂತ ಚಕ್ರಪಾಣಿ ಮುಂತಾದವರು ಪಂಢರಪುರವನ್ನು ಭಕ್ತಿ ಪ್ರಸಾರದ ಕೇಂದ್ರವನ್ನಾಗಿ ಮಾಡಿಕೊಂಡು ತಮ್ಮ ಅಮೂಲ್ಯವಾದ ಕೀರ್ತನೆ, ಭಜನೆ, ಗೌಳಣಿ, ಅಭಂಗಗಳ, ಜ್ಞಾನೋಪದೇಶದ ಪ್ರವಚನಗಳ ಮುಖಾಂತರ ಸಮಾಜದ ಎಲ್ಲ ಸ್ತರದ ಜನರನ್ನು ಆಕರ್ಷಿಸಿದರು. ಅಂಧಾನುಕರಣೆ, ಅಜ್ಞಾನ ಹಾಗೂ ಮದಹಂಕಾರದಿಂದ ತುಂಬಿದ್ದ ಧಾರ್ಮಿಕ ಮುಖಂಡರನ್ನು ಪ್ರೀತಿ, ಭಗವದ್ಭಕ್ತಿ, ವಿನಯ ಮುಂತಾದ ಸದ್ಗುಣಗಳಿಂದ ಸದೆಬಡೆದು ಸ್ನೇಹ-ಸೌಹಾರ್ದಮಯ ವಾತಾವರಣವನ್ನು ನಿರ್ಮಿಸಿದರು. ಸಂತ ತುಕಾರಾಮ ಮಹಾರಾಜರು ಘೋರ ತಪವನ್ನು ಗೈದು ಪಾಂಡುರಂಗನನ್ನು ಸಾಕ್ಷಾತ್ಕರಿಸಿಕೊಂಡು ಈ ಜ್ಞಾನಮಂದಿರಕ್ಕೆ ಕಳಸವನ್ನಿರಿಸಿ ಭಕ್ತಿಯ ಮಹಿಮೆಯನ್ನು ಹೆಚ್ಚಿಸಿದರು. ಎಲ್ಲ ಸಂತ–ಮಹಾನುಭಾವರೂ ಇಂತಹ ಭಕ್ತಿ ಪ್ರಧಾನವಾದ ಧರ್ಮವನ್ನು ಸ್ಥಾಪಿಸುವಲ್ಲಿ ಅನೇಕ ಅಪಮಾನಾದಿ ಕಷ್ಟ ನಷ್ಟಗಳನ್ನು ಸಹಿಸಿ, ಹಸನ್ಮುಖದಿಂದ ಆತ್ಮಾನಂದದ ಅಮೃತವನ್ನು ಸೂರೆಗೊಂಡು ಜನತಾ ಜನಾರ್ದನರ ಪೂಜೆಗೈದು ಕೃತಾರ್ಥರಾದರು.

ಇಲ್ಲಿ ಕೆಲವೊಬ್ಬ ಸಂತರ ಉದಾಹರಣೆಗಳಿಂದ ಗುರುವಾಕ್ಯ, ಗುರುಗಳ ಆಜ್ಞಾಪಾಲನೆ ಹಾಗೂ ದೇಹಭಾವವನ್ನು ತ್ಯಜಿಸಿ ಜ್ಞಾನಕ್ಕೆ ಪ್ರಾಧಾನ್ಯತೆಯನ್ನು ಪ್ರತ್ಯಕ್ಷ ಆಚರಣೆಯಿಂದ ತೋರಿಸಿದ್ದನ್ನು ಸ್ಪಷ್ಟೀಕರಿಸಲು ಪ್ರಯತ್ನಿಸಲಾಗಿದೆ.

ಬ್ರಾಹ್ಮಣ ಕುಲದಲ್ಲಿ ಜನ್ಮವೆತ್ತಿ ಗೃಹಸ್ಥರಾಗಿದ್ದ ವಿಠ್ಠಲಪಂತರು ಪ್ರಪಂಚದ ಅಸಾರತೆಯನ್ನು ಕಂಡು ತೀವ್ರ ವೈರಾಗ್ಯ ತಾಳಿ ಸಂನ್ಯಾಸಿಗಳಾದರು. ಪತಿಯು ಸಂನ್ಯಾಸಿಯಾಗಿ ದೂರ ಹೋದರೂ ಭಗವಂತನಲ್ಲಿ ಅಪಾರವಾದ ಶ್ರದ್ಧಾಭಕ್ತಿಯಿಂದ ಸೇವೆಗೈದ ಮಹಾಸಾಧ್ವಿಯ ತಪದ ಪ್ರಭಾವದಿಂದ ಭಗವಂತನೇ ಅವಳ ಉದರದಲ್ಲಿ ಅವತರಿಸಲು ಇಚ್ಛಿಸಿದನು. ವಿಠ್ಠಲಪಂತರಿಗೆ ಗೃಹಸ್ಥಾಶ್ರಮ ಸ್ವೀಕರಿಸಲು ಗುರುವಾಜ್ಞೆಯಾಯಿತು. ಸಂನ್ಯಾಸಿಯಾಗಿದ್ದ ವಿಠ್ಠಲಪಂತರು ಮರಳಿ ಗೃಹಸ್ಥರಾದಾಗ ಅನೇಕ ಸಂಕಟಗಳಿಗೆ ತುತ್ತಾಗಬೇಕಾಯಿತು. ಸರ್ವಶಾಸ್ತ್ರಗಳಿಗಿಂತಲೂ ಗುರುವಾಜ್ಞೆಯೇ ಸರ್ವಶ್ರೇಷ್ಠವೆಂದು ದೃಢವಾಗಿ ನಂಬಿದ್ದರು. ಮುಂದೆ ಯೋಗ್ಯ ಸಮಯಕ್ಕೆ ವಿಠ್ಠಲಪಂತ-ರುಕ್ಮಿಣೀಬಾಯಿಯರು ನಿವೃತ್ತಿ, ಜ್ಞಾನದೇವ, ಸೋಪಾನ, ಮುಕ್ತಾಬಾಯಿ ಎಂಬ ನಾಲ್ಕು ಮಕ್ಕಳಿಗೆ ಜನ್ಮವನ್ನಿತ್ತರು. ಬ್ರಾಹ್ಮಣರು ಕ್ರುದ್ಧರಾಗಿ ಸಂನ್ಯಾಸಿಯ ಮಕ್ಕಳಿಗೆ ಶಾಸ್ತ್ರಗಳ ಅನುಸಾರ ಎಲ್ಲಿಯೂ ಸ್ಥಾನವಿಲ್ಲವೆಂದು ನಿರ್ಧರಿಸಿ ವಿಠ್ಠಲಪಂತನ ಮನೆತನವನ್ನು ಸಮಾಜಬಾಹಿರರನ್ನಾಗಿ ಮಾಡಿದರು.

ಮಕ್ಕಳ ಅಭ್ಯುದಯಕ್ಕಾಗಿ ವಿಠ್ಠಲಪಂತ ಬ್ರಾಹ್ಮಣರಲ್ಲಿ ಪರಿಹಾರವೇನೆಂದು ವಿನಂತಿಸಲು, ಪತಿ-ಪತ್ನಿಯರಿಬ್ಬರಿಗೂ ದೇಹಾಂತ ಪ್ರಾಯಶ್ಚಿತ್ತವೇ ಉಪಾಯವೆಂದು ನಿರ್ಣಯಿಸಿದರು. ಮಕ್ಕಳು ಶುದ್ಧೀಕರಣ ಹೊಂದಲಿ, ಅವರ ಭಾವೀ ಜೀವನವು ಸುಗಮವಾಗಲೆಂದು ನಿಶ್ಚಯಿಸಿ ಇಬ್ಬರೂ ದೇಹಾಂತ ಪ್ರಾಯಶ್ಚಿತ್ತವನ್ನು ಹೊಂದಿದರು. ಇಷ್ಟಾದರೂ ಆಳಂದಿಯ ಪಂಡಿತರು ಸಂನ್ಯಾಸಿಯ ಮಕ್ಕಳೆಂದು ಹೀಯಾಳಿಸಿ ಮೌಂಜಿ ಬಂಧನಕ್ಕೆ ಸಮ್ಮತಿ ಕೊಡಲಿಲ್ಲ. ಪೈಠಣದ ಪಂಡಿತರಲ್ಲಿ ಆಜ್ಞಾಪತ್ರ ಕೇಳಲು ಹೋದಾಗ "ನೀನು ಎದುರಿಗೆ ಬರುತ್ತಿರುವ ಕೋಣನಿಂದ ವೇದವನ್ನು ನುಡಿಸಿ ನಿಮ್ಮ ಶುದ್ಧತೆಯನ್ನು ಪ್ರಮಾಣೀಕರಿಸಬೇಕು", ಎಂದು ಜ್ಞಾನದೇವರಿಗೆ ಉತ್ತರಿಸಿದರು. ಭಗವಂತನನ್ನು ಸ್ಮರಿಸಿ, ಸರ್ವಭೂತಗಳಲ್ಲಿರುವ ಭಗವದ್ಭಾವದಲ್ಲಿ ದೃಢ ನಂಬಿಕೆಯಿದ್ದ ಜ್ಞಾನದೇವರು ಕೋಣಕ್ಕೂ ವೇದಪಠಣದ ಸಾಮರ್ಥ್ಯವಿದೆಯೆಂದು ಕೋಣನ ಮುಖದಿಂದ ವೇದನುಡಿಸಿ ತೋರಿಸಿದರು. ಪಂಡಿತರು, "ನೀವು ಸ್ವಯಂಭೂ, ದೇವಾಂಶ ಸಂಭೂತರಿರುವಿರಿ, ನಿಮಗೆ ಶುದ್ಧತೆಯ ಪ್ರಮಾಣಪತ್ರದ ಅವಶ್ಯಕತೆಯಿಲ್ಲ", ಎಂದು ಸಾರಿ ಶರಣಾಗತರಾದರು. ಪಂಡಿತರಿಗೆಲ್ಲ ಜ್ಞಾನದೇವಾದಿ ನಾಲ್ಕೂಮಂದಿ ನಮಸ್ಕರಿಸಿ ಬ್ರಾಹ್ಮಣತ್ವದ ಶ್ರೇಷ್ಠತೆಯನ್ನು ಎತ್ತಿ ಹಿಡಿದು ತಾವು ಸಂಚಾರ

ಮಾಡುತ್ತ ಮುಂದೆ ಸಾಗಿದರು.

೧೪೦೦ ವರ್ಷಗಳವರೆಗೆ ಬಾಳಿದ ಯೋಗಾಭ್ಯಾಸ ಪರಿಣಿತನಾದ ಚಾಂಗದೇವನು ಹುಲಿಯನ್ನು ವಾಹನವನ್ನಾಗಿಸಿಕೊಂಡು, ಹಾವನ್ನು ಹಣ್ಣಾಗಿ ಮಾಡಿ ತಾನೇ ಶ್ರೇಷ್ಠನೆಂದು ದುರಹಂಕಾರದಿಂದ ಭ್ರಾಂತನಾಗಿದ್ದನು. ಜ್ಞಾನೇಶ್ವರ ಮಹಾರಾಜರು ಕೋಣನಿಂದ ವೇದವನ್ನು ನುಡಿಸಿದ ಸುದ್ದಿ ತಿಳಿದು ಅವರನ್ನು ಸಂದರ್ಶಿಸಲು ತನ್ನ ಶಿಷ್ಯನ ಕೈಯಲ್ಲಿ ಒಂದು ಪತ್ರವನ್ನು ಕಳುಹಿಸಿದನು. ತನಗಿಂತ ವಯಸ್ಸಿನಲ್ಲಿ ಚಿಕ್ಕವರಾದ ಜ್ಞಾನೇಶ್ವರರಿಗೆ ನಮಸ್ಕಾರವೆಂದು ಹೇಗೆ ಬರೆಯುವುದು? ಆಶೀರ್ವಾದವೆಂದು ಬರೆದರೆ ಜ್ಞಾನ ದಿಂದ ಪ್ರಖ್ಯಾತಹೊಂದಿರುವರು! ಹೀಗೆ ಗೊಂದಲ ಉಂಟಾಗಿ ಏನೂ ಬರೆಯದೆ ಬಿಳೀ ಕಾಗದವನ್ನು ತನ್ನ ಶಿಷ್ಯನೊಂದಿಗೆ ಕಳಿಸಿ ಭೆಟ್ಟಿಮಾಡಿ ಬಾರೆಂದು ತಿಳಿಸಿದನು. ಅವನ ಖಾಲಿ ಕಾಗದಕ್ಕೆ ಉತ್ತರವಾಗಿ ಜ್ಞಾನೇಶ್ವರರು ೬೫ ನುಡಿಗಳಲ್ಲಿ ವೇದಾಂತಸಾರವನ್ನೇ ಬರೆದು ಕಳಿಸಿದರು. ಹಾಳು ಗೋಡೆಯ ಮೇಲೆ ಕುಳಿತಿದ್ದ ಜ್ಞಾನೇಶ್ವರರು ಅದನ್ನೇ ಸಚೇತನಗೊಳಿಸಿ ವ್ಯಾಘ್ರಾರೂಢನಾಗಿ ದರ್ಶನಕ್ಕೆ ಬರುತ್ತಿದ್ದ ಚಾಂಗದೇವನನ್ನು ಎದುರುಗೊಂಡರು. ಆಗ ಯೋಗಾಭಿಮಾನಿಯಾದ ಚಾಂಗ ದೇವನ ಅಹಂಕಾರವೆಲ್ಲ ನುಚ್ಚುನೂರಾಗಿ ಹೋಗಿ ಶರಣಾಗತನಾದನು. ಮುಂದೆ ಮುಕ್ತಾಬಾಯಿಯು ಚಾಂಗದೇವನಿಗೆ ಗುರುವಾಗಿ ಸ್ತ್ರೀ-ಪುರುಷರೆಂಬ ಭೇದಬುದ್ಧಿಯನ್ನು ತೆಗೆದು ಹಾಕಿ ಜ್ಞಾನಸ್ವರೂಪ ಆತ್ಮನೇ ನೀನಿರುವಿ ಎಂಬ ಶುದ್ಧ ಜ್ಞಾನೋಪದೇಶವನ್ನು ಮಾಡಿ ಮುಕ್ತನನ್ನಾಗಿಸಿದಳು.

ಒಮ್ಮೆ ಜ್ಞಾನೇಶ್ವರಾದಿಗಳಿಗೆ ಮುಕ್ತಾಬಾಯಿಯಿಂದ ಮಂಡಿಗೆಯ ಊಟ ಮಾಡಬೇಕೆಂದೆನಿಸಿತು. ಮಂಡಿಗೆ ಮಾಡಲು ಮಡಕೆ ಬೇಕಾಗಿತ್ತು. ಮಡಕೆಯನ್ನು ತರಲು ಕುಂಬಾರ ವಿನೋಬಾನ ದರ್ಪಕ್ಕೆ ಹೆದರಿ ಅವನ ಮನೆಗೆ ಹೋಗಲು ನಿರಾಕರಿಸಿದಳು. ನಿರಾಶೆಯಿಂದ ಸಣ್ಣ ಮೋರೆ ಮಾಡಿಕೊಂಡು ಮರಳಿದ ಮುಕ್ತಾಬಾಯಿಯನ್ನು ಪ್ರೋತ್ಸಾಹಿಸಿ, ಜ್ಞಾನದೇವರು "ನಮ್ಮನ್ನು ದ್ವೇಷಿಸುತ್ತಿರುವ ವಿನೋಬಾನ ಮೇಲೆ ನಾವು ಕ್ರೋಧಾವಿಷ್ಟರಾಗುವುದು ಬೇಡ. ಮಡಕೆ ದೊರೆಯದಿದ್ದರೆ ಏನಾಯಿತು? ನಾನು ಯೋಗಾಗ್ನಿಯನ್ನು ಪ್ರಜ್ವಲಿಸುವೆನು. ನೀನು ಮಂಡಿಗೆಗಳನ್ನು ಮಾಡುತ್ತ ನನ್ನ ಬೆನ್ನ ಮೇಲೆ ಬೇಯಿಸುತ್ತ ಹೋಗು", ಎಂದು ಧೈರ್ಯ ಹೇಳಿದರು. ಅದರಂತೆ ಮಂಡಿಗೆ ಸಿದ್ಧವಾಗಲು, ದೂರದಲ್ಲಿ ನಿಂತು ನೋಡುತ್ತಿದ್ದ ವಿನೋಬಾನಿಗೆ ಪಶ್ಚಾತ್ತಾಪವಾಗಿ, ಜ್ಞಾನ ದೇವಾದಿಗಳನ್ನು ದೇವರೆಂದೇ ಭಾವಿಸಿ ಶರಣಾಗತನಾದ.

ಹೀಗೆ ಆಗಿನ ಸಮಾಜದಲ್ಲಿನ ಅನೇಕ ಪ್ರತಿಷ್ಠಿತರು ಬೇಕಾದಷ್ಟು ಪೀಡಿಸಿದರೂ ಅದನ್ನೆಲ್ಲ ಸಹಜವಾಗಿ ಸಹಿಸಿ



ಸಂತ ಜ್ಞಾನೇಶ್ವರ

ಕೊಂಡು, ಕರ್ಮಠರನ್ನ, ದುರಭಿಮಾನಿಗಳನ್ನ, ದುಷ್ಟರನ್ನ ಪರಿವರ್ತನಗೊಳಿಸಿ, ಸಮಾಜದಲ್ಲಿ ಶುದ್ಧ ಅಧ್ಯಾತ್ಮ ತತ್ತ್ವವನ್ನು, ಸಮತ್ವವನ್ನು ಆಚರಣೆಯಲ್ಲಿ ತಂದರು. ಇದರಿಂದ 'ವಾರಕರಿ' ಸಂಪ್ರದಾಯದ ಖ್ಯಾತಿಯು ಹೆಚ್ಚಿತು. ಆದರೆ ಈಗಿನ ಸಮಯದಲ್ಲಿ ಅದು ಬಹಳಷ್ಟು ಆಷಾಢಭೂತಿತನ ಹೊಂದಿದೆ. ವೇದಾಂತವು ಕೇವಲ ಪದ, ಗಾಯನ, ಕೀರ್ತನಾದಿಗಳಿಗೆ ಸೀಮಿತವಾಗಿದ್ದು ನಿತ್ಯದ ವ್ಯವಹಾರದಲ್ಲಿ ಸಹನೆ, ಪ್ರೇಮ, ಸೌಹಾರ್ದ, ಸಹಾನುಭೂತಿ, ಸಮತ್ವಾದಿಗಳಿಲ್ಲದೆ ಈ ಸಂಪ್ರದಾಯವು ತನ್ನ ಅಂತಃಸತ್ವವನ್ನು ಕಳೆದುಕೊಂಡಿದೆ.

ಸಂತ ಜ್ಞಾನೇಶ್ವರರ ಸಮಕಾಲೀನನಾಗಿದ್ದ ಸಂತ ನಾಮದೇವನು, ತಾನು ವಿಠ್ಠಲನ ಸಗುಣ ಸಾಕ್ಷಾತ್ಕಾರವನ್ನು ಪಡೆದವನು, ದೇವರೊಡನೆ ಸಂಭಾಷಣೆ ಮಾಡಬಲ್ಲ ಶ್ರೇಷ್ಠ ಭಕ್ತನೆಂದು ಭ್ರಮೆಗೊಳಗಾಗಿದ್ದನು. ಜ್ಞಾನೇಶ್ವರ ಮಹಾರಾಜರು ಅವನನ್ನು ಹಾಗೂ ಗೋರಾಕುಂಬಾರಾದಿ ಅನೇಕ ಸಂತರನ್ನು ಕರೆದುಕೊಂಡು ಸಂತಯಾತ್ರೆಗೆ ಹೊರಟರು. ಒಮ್ಮೆ ಜ್ಞಾನೇಶ್ವರರು ಅಲ್ಲಿದ್ದ ಸಂತರಲ್ಲಿ ಯಾರು ಜ್ಞಾನಾಗ್ನಿಯಲ್ಲಿ ಸುಟ್ಟು ಗಟ್ಟಿಯಾಗಿರುವರೆಂಬುದನ್ನು ಪರೀಕ್ಷಿಸೆಂದು ಗೋರಾ ಕುಂಬಾರನಿಗೆ ಆಜ್ಞೆ ಮಾಡಿದರು. ಅವನು ಎಲ್ಲರನ್ನೂ ಪರೀಕ್ಷಿಸಿ ಕೊನೆಗೆ ನಾಮದೇವರೆಡೆಗೆ ಬಂದು ತಟ್ಟುಮಣೆಯಿಂದ ಹೊಡೆಯಲಾಗಿ ಶ್ರೇಷ್ಠ ಭಕ್ತನಾದ ನನ್ನನ್ನು ಅವಮಾನಿಸುತ್ತಾರೆಂದು ಕ್ರೋಧಾನ್ವಿತನಾಗಿ ಪಾಂಡುರಂಗನ ಕಡೆಗೆ ಧಾವಿಸಿ ಹೋಗಿ ಸಂತರ ವಿರುದ್ಧ ದೂರು ಹೇಳಿದನು. ಪಾಂಡು ರಂಗನು ಮುಗುಳುನಗೆ ನಕ್ಕು ಹಿತೋಪದೇಶ ಮಾಡಿದನು. 'ನಾಮದೇವಾ! ನಿನಗೆ ನನ್ನ ದರ್ಶನವಾಗಿದೆ. ಆದರೆ ನಾನೇ ಎಲ್ಲರಲ್ಲಿಯೂ ತುಂಬಿರುವೆನೆಂಬ ವಿಶ್ವರೂಪದರ್ಶನವಾಗಿಲ್ಲ. ಅದು ಕೇವಲ ಗುರುಕೃಪೆಯಿಂದ ಸಾಧ್ಯ ಆಗುತ್ತದೆ. ಅದಕ್ಕಾಗಿ ನೀನು ಅವಂಧ್ಯಾ ನಾಗನಾಥದ ವಿನೋಬಾ ಖೇಚರನಲ್ಲಿಗೆ ಹೋಗಿ ಅವರಿಂದ ಗುರುದೀಕ್ಷೆ ಪಡೆದು ಜ್ಞಾನಿಯಾಗು." ಎಂದು ತಿಳಿಹೇಳಿ ಆಶೀರ್ವದಿಸಿದನು.

ದೇವರ ಆಜ್ಞೆಯಂತೆ ನಾಮದೇವನು ಅವಂಧ್ಯಾ ನಾಗನಾಥ ದೇವಾಲಯದಲ್ಲಿ ಹೋಗಿ ನೋಡುತ್ತಾನೆ, ಒಬ್ಬ ಮುದುಕನು ಕಾಲಲ್ಲಿ ಮೆಟ್ಟುಗಳನ್ನು ಧರಿಸಿಕೊಂಡೇ ಶಿವಲಿಂಗದ ಮೇಲೆ ಕಾಲನ್ನಿಟ್ಟುಕೊಂಡು ಮಲಗಿದ್ದಾನೆ! ಇದನ್ನು ಕಂಡು ನಾಮದೇವನಿಗೆ ಅಸಹ್ಯವೆನಿಸಿತು. ಇಂಥಾ ದೇವದ್ರೋಹಿಯಿಂದ ನಾನು ಹೇಗೆ ಉಪದೇಶ ಪಡೆಯಲಪ್ಪಾ ಎಂದು ಕ್ಷಣ ಹೊತ್ತು ಚಿಂತಿಸಿದನು. ಆದರೂ ಧೈರ್ಯದಿಂದ ಆ ಮುದುಕನಿಗೆ, "ಮಹಾನುಭಾವ! ಮಹಾದೇವನ ಶಿರದ ಮೇಲೆ ಕಾಲನ್ನಿಟ್ಟು ಮಲಗಿರುವುದು ಉಚಿತವಾಗಿ ತೋರದು, ದಯವಿಟ್ಟು ಕಾಲನ್ನು ಕೆಳಗಿಡಿ, ಎಂದು ಹೇಳಿದನು. ಅದಕ್ಕೆ ಉತ್ತರವಾಗಿ ವಿಸೋಬಾ ಖೇಚರನು "ಅಪ್ಪಾ! ವೃದ್ಧಾಪ್ಯದಿಂದ ಶರೀರವು ಶಿಥಿಲವಾಗಿದ್ದು ನನ್ನ ಕಾಲುಗಳನ್ನು ಎತ್ತಿ ಇಡಲು ಸಾಧ್ಯವಾಗುತ್ತಿಲ್ಲ. ನೀನೇ ದಯಮಾಡಿ ಶಿವಲಿಂಗವಿಲ್ಲದಲ್ಲಿ ನನ್ನ ಕಾಲನ್ನಿರಿಸಪ್ಪಾ", ಎಂದನು. ನಾಮದೇವನು ಆ ಮೆಟ್ಟುಗಳುಳ್ಳ ಕಾಲನ್ನೆತ್ತಿ ಬದಿಗೆ ಸರಿಸಿಡಲಾಗಿ ಅಲ್ಲಿಯೂ ಒಂದು ಲಿಂಗವು ಉದ್ಭವಿಸಿತು. ಹೀಗೆ ಆ ವೃದ್ಧನ ಕಾಲುಗಳನ್ನಿರಿಸಿದಲ್ಲೆಲ್ಲಾ ಶಿವಲಿಂಗಗಳೇ ಉದ್ಭವಿಸಿದವು. ಆಗ ನಾಮದೇವನ ಸಗುಣ ಸಾಕ್ಷಾತ್ಕಾರದ ಅಹಂಕಾರವೆಲ್ಲ ಕರಗಿ ನೀರಾಯಿತು. ಇವನೇನು ಸಾಮಾನ್ಯನಿರದೆ ನಿಜವಾಗಿ ನನ್ನನ್ನು ಉದ್ಧರಿಸುವ ಸದ್ಗುರುವೇ ಇರುವನೆಂದು ದೃಢವಾಗಿ ನಂಬಿದನು. ಪೂಜ್ಯಭಾವದಿಂದ ಸಾಷ್ಟಾಂಗ ನಮಸ್ಕರಿಸಿ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಉದ್ಧರಿಸೆಂದು ಪ್ರಾರ್ಥಿಸಿದನು. ಮುಂದೆ ಗುರುಗಳ ಅನುಗ್ರಹದಿಂದ ಜ್ಞಾನೋದಯವಾಯಿತು. ದೇವರಿಗಿಂತ ಸದ್ಗುರುವೇ ಶ್ರೇಷ್ಠನೆಂದು ಈ ಘಟನೆಯಿಂದ ಸಿದ್ಧವಾಯಿತು.

ಜ್ಞಾನೋದಯ ಆದಮೇಲೆ ಒಮ್ಮೆ ನಾಯಿಯೊಂದು ಒಣರೊಟ್ಟಿಯನ್ನು ಕದ್ದುಕೊಂಡು ಓಡುತ್ತಿರುವಾಗ ಅದರ ಹಿಂದೆ ನಾಮದೇವನು ತುಪ್ಪದ ಬಟ್ಟಲನ್ನು ತೆಗೆದುಕೊಂಡು "ವಿಠ್ಠಲಾ! ನಿನಗೆ ಒಣರೊಟ್ಟಿಯಿಂದ ಹೊಟ್ಟೆ ಕಡಿಯಬಹುದು. ಅದಕ್ಕೆ ತುಪ್ಪವನ್ನು ಹಚ್ಚಿಕೊಂಡು ತಿನ್ನು" ಎಂದೆನ್ನುತ್ತಾ ನಾಯಿಯ ಬೆನ್ನುಹತ್ತಿದನು. ಸತ್ಯಸಿದ್ಧಾಂತದ ಅನುಭವ ಹೊಂದಿದ ನಾಮದೇವನು ಇಡೀ ಭಾರತದ ತೀರ್ಥಯಾತ್ರೆ ಮಾಡಿದನು. ಪಂಜಾಬಕ್ಕೆ ಹೋದಾಗ ಇವನನ್ನು ಗುರುನಾನಕನ ಅವತಾರವೆಂದು ಭಾವಿಸಿದರು. ಮರಾಠೀ, ಹಿಂದೀ, ಪಂಜಾಬಿಯಲ್ಲಿ ಅನೇಕ ಪದಗಳನ್ನು ರಚಿಸಿ ಖ್ಯಾತಿವಂತನಾದನು.

ಹೀಗೆ ಮಹಾರಾಷ್ಟ್ರದ ಜ್ಞಾನದೇವ, ನಾಮದೇವ, ಚೋಖಾಮೇಳಾ, ಜನಾಬಾಯಿ, ಮುಕ್ತಾಬಾಯಿ, ಗೋರಾ ಕುಂಬಾರ, ಸಾವತಾ ಮಾಳಿ ಮುಂತಾದ ಅನೇಕ ಸಂತರು ವೇದಾಂತವನ್ನು ಆಚರಣೆಯಲ್ಲಿ ತಂದು ಅದನ್ನು ಪಂಡಿತರಿಂದ ಪಾಮರರವರೆಗೂ ರೂಢಿಗೊಳಿಸಲು ಅತಿ ಪ್ರಯತ್ನಪಟ್ಟರು. ಜನರ ಮೂಢನಂಬಿಕೆ, ಹಳೇ ಕಂದಾಚಾರಗಳನ್ನು ತೊಡೆದುಹಾಕಿ ತಮ್ಮ ಶುದ್ಧ ನೈತಿಕ ಆಚರಣೆಯಿಂದ, ಗುರುಭಕ್ತಿಯಿಂದ ಪ್ರಭಾವ ಬೀರಿ ಅಪಾರ ಜನಸಮೂಹವನ್ನು ಭಕ್ತಿಮಾರ್ಗಕ್ಕೆ ಹಚ್ಚಿದರು. ಅದು ಈಗಲೂ ಸಾಗಿ ಬಂದಿದೆ. ಈ ವಾರಕರಿ ಸಂಪ್ರದಾಯದ ಅನುಯಾಯಿಗಳು ಪ್ರತಿ ವರ್ಷವೂ ಆಷಾಢ, ಕಾರ್ತಿಕ, ಮಾಘ ಮಾಸಗಳ ಉತ್ಸವ 'ಕ್ಕಾಗಿ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಪಾದಯಾತ್ರಿಗಳಾಗಿ ಪಂಢರ 'ಪುರಕ್ಕೆ ಆಗಮಿಸಿ ನಾದಬ್ರಹ್ಮ ವಿಠ್ಠಲನ ದರ್ಶನ ಪಡೆದು, ಸಂತರ ಕೀರ್ತನ–ಪ್ರವಚನಗಳನ್ನು ಕೇಳಿ ಕೃತಾರ್ಥರಾಗುತ್ತಾರೆ.

ಸಂತ ಜ್ಞಾನೇಶ್ವರರು ಭಗವದ್ಗೀತೆಗೆ ಭಾಷ್ಯ ಬರೆದುದಲ್ಲದೆ ಅಮೃತಾನುಭವ ಎಂಬ ಗ್ರಂಥವನ್ನೂ ಸಗುಣ–ನಿರ್ಗುಣಪರ ಅಭಂಗಗಳನ್ನೂ ರಚಿಸಿ ವಾರಕರಿ ಸಂಪ್ರದಾಯದ ಭದ್ರ ಬುನಾದಿಯನ್ನು ಹಾಕಿದರು. ನಾಮದೇವಾದಿಗಳು ಗಾಥಾ, ಅಭಂಗಗಳನ್ನು ರಚಿಸಿ ಮಂದಿರ ನಿರ್ಮಿಸಿದರು. ತುಕಾರಾಮರು ಅಪಾರ ಅಭಂಗಗಳನ್ನು ರಚಿಸಿ ವೇದಾಂತದ ಸಾರ ಸರ್ವಸ್ವವನ್ನು ಸರ್ವರಿಗೂ ತಿಳಿಯುವಂತೆ ಮಾಡಿ ಜ್ಞಾನ ಮಂದಿರಕ್ಕೆ ಕಲಶಪ್ರಾಯರಾಗಿ ಶೋಭಿಸಿದರು. ಏಕನಾಥರು ಭಾಗವತ, ಭಾವಾರ್ಥರಾಮಾಯಣ, ಭಾರುಡ ಮುಂತಾದ ಗ್ರಂಥಸಂಪದವನ್ನು ಕೊಟ್ಟು ಜನರನ್ನು ಜಾಗೃತಗೊಳಿಸಿದರು. ರಾಮದಾಸರು ದಾಸಬೋಧೆ, ಆತ್ಮಾರಾಮಾದಿ ಗ್ರಂಥ ರಚಿಸಿ ವೇದಾಂತವನ್ನು ಸರಳಶೈಲಿಯಲ್ಲಿ ಬೋಧಿಸಿದರು. ಅದರಂತೆ ಮಹಾರಾಷ್ಟ್ರ–ಕರ್ನಾಟಕದ ಗಡಿಯಲ್ಲಿ ದತ್ತಾವತಾರಿಗಳೆಂದೇ ಪ್ರಸಿದ್ಧರಾದ ಸ.ಸ.ಗಣಪತರಾವ್ ಮಹಾರಾಜರು ದಾಸ ಬೋಧವನ್ನು ಕನ್ನಡಿಸಿದರಲ್ಲದೆ "ಸುಲಭ ಆತ್ಮಜ್ಞಾನ"ವೆಂಬ ವೇದಾಂತ ಸಾರವನ್ನೊಳಗೊಂಡ ಅನೇಕ ಗ್ರಂಥಗಳನ್ನು ರಚಿಸಿ ಜನಪ್ರಿಯರಾದರು.

ಹೀಗೆ ಆಗಿನಿಂದ ಈಗಿನವರೆಗೆ ಆಗಿಹೋದ ಅಪಾರ ಸಂತಶ್ರೇಷ್ಠರು ತಮ್ಮ ವಾಣಿಯಿಂದ, ಆಚರಣೆಯಿಂದ, ಗ್ರಂಥರಚನೆಯಿಂದ ಅಭಂಗ, ಪದ-ಭಾರುಡಗಳಿಂದ ಜನರಲ್ಲಿ ಅಧ್ಯಾತ್ಮ ತತ್ತ್ವವನ್ನು ಅಖಂಡವಾಗಿ ಜಾಗೃತವಾಗಿರಿಸಿಕೊಂಡು ಬಂದು ಶಾಂತಿ, ಸಮಾಧಾನ, ತೃಪ್ತಿ ಇವುಗಳು ನೆಲೆಗೊಳಿಸುವಂತೆ ಮಾಡಿರುವರು. ಈ ಸಂತರು ಜನರಲ್ಲಿ ಸ್ವಾಭಿಮಾನ, ರಾಷ್ಟ್ರಾಭಿಮಾನ, ಐಕ್ಯತೆಯನ್ನು ಸಾಧಿಸಿ ಭಾರತ ದೇಶದ ಶ್ರೇಷ್ಠತೆ, ದಿವ್ಯತೆ, ವೇದಾಂತದ ಮೌಲ್ಯಗಳನ್ನು ಎತ್ತಿ ತೋರಿಸಿ ಜಗತ್ಪ್ರಸಿದ್ಧಿಯನ್ನು ಸಾಧಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ. ಅವರು ಶ್ರಮಪಟ್ಟು ಕೊಟ್ಟಿರುವ ಈ ಅಧ್ಯಾತ್ಮ ಸಂಪತ್ತಿಗೆ ನಾವೆಲ್ಲರೂ ವಾರಸುದಾರರಿದ್ದು, ಅದರ ಸದುಪಯೋಗ ಪಡೆದು, ಧನ್ಯರಾಗೋಣ! ✪